# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/104/2015-16 ದಿನಾಂಕ :23-06-2016.

**ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,**
**ಉಪ ತಹಶೀಲ್ದಾರರು,**
**ನಾಡ ಕಾರ್ಯಾಲಯ, ಕೋಗಳಿ**

| ಅರ್ಜಿದಾರರು | ತಕರಾರುದಾರರು |
|---|---|
| 1.ಎ.ಸಿದ್ದಪ್ಪ ತಂದೆ ಲೇಟ್ ಕೊಟ್ರಪ್ಪ<br>2.ಎ.ವಿಶಾಲಾಕ್ಷಮ್ಮ ಗಂಡ ಲೇಟ್ ವೃಷಬೇಂದ್ರಪ್ಪ<br>3.ಎ.ಬಸಪ್ಪ ತಂದೆ ಲೇಟ್ ಕೊಟ್ರಪ್ಪ<br>4.ಎ.ಶಿವಪುತ್ರಪ್ಪ ತಂದೆ ಕೊಟ್ರಪ್ಪ<br>ಗ್ರಾಮ:-ವಟ್ಟಮ್ಮನಹಳ್ಳಿ ತಾ:ಹೆಚ್.ಬಿ.ಹಳ್ಳಿ | ಮಲ್ಲಮ್ಮ ಗಂಡ ಲೇಟ್ ಬಸಪ್ಪ<br>ಗ್ರಾಮ:-ವಟ್ಟಮ್ಮನಹಳ್ಳಿ ತಾ:ಹೆಚ್.ಬಿ.ಹಳ್ಳಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ವರ್ಲಹಳ್ಳಿ | 463/ಸಿ/1ಎ | 7-31 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರ್ಲಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವಟ್ಟಮ್ಮನಹಳ್ಳಿ ಗ್ರಾಮದ ನಿವಾಸಿಯಾದ 1.ಎ.ಸಿದ್ದಪ್ಪ ತಂದೆ ಲೇಟ್ ಕೊಟ್ರಪ್ಪ 2.ಎ.ವಿಶಾಲಾಕ್ಷಮ್ಮ ಗಂಡ ಲೇಟ್ ವೃಷಬೇಂದ್ರಪ್ಪ 3.ಎ.ಬಸಪ್ಪ ತಂದೆ ಲೇಟ್ ಕೊಟ್ರಪ್ಪ 4.ಎ.ಶಿವಪುತ್ರಪ್ಪ ತಂದೆ ಕೊಟ್ರಪ್ಪ ಇವರ ಹೆಸರಿಗೆ ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆಯನ್ನು ಮಾಡಲು ದಿನಾಂಕ:27.01.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:01.02.2016 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:09.02.2016 ರಂದು ಮಲ್ಲಮ್ಮ ಗಂಡ ಲೇಟ್ ಬಸಪ್ಪಇವರು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.73/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ರವರು ಈ ಕಾರ್ಯಾಲಯಕ್ಕೆ ವರದಿಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿ:03.05.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:03.05.2016 ರಿಂದ 23.06.2016 ರವರೆಗೆ ವಿಚಾರಣೆಗೆ ನಡೆಸಲಾಯಿತು. ಉಭಯ ಪಕ್ಷಕಾರರು ಹಾಜರಾಗಿರುತ್ತಾರೆ. ತಕರಾರುದರರು ಹಾಜರಾಗಿ ಹೇಳುವಂತೆ; ಸದರಿ ಜಮೀನಿನಲ್ಲಿ ವಿಸ್ತೀರ್ಣ 0-05 ಸೆಂಟ್ಸ್ ನನಗೆ ಬರಬೇಕೆಂದು ಹಾಗೂ ಅರ್ಜಿದಾರರಿಗೂ ನಮಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ[ವಾರಸುದಾರರಾಗಿರುವುದಿಲ್ಲ] ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಅರ್ಜಿದಾರರಿಗೂ ಮತ್ತು ಜಂಟಿ ಪಟ್ಟಾದಾರರಾದ ಎ.ನೀಲಮ್ಮ ಗಂಡ ಗಿಡ್ಡಪ್ಪ ಮತ್ತು ಶೀಗೆನಹಳ್ಳಿ ಮಲ್ಲಮ್ಮ ತಾಯಿ ಬಸವ್ವ ಇವರಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ[ವಾರಸುದಾರರಾಗಿರುವುದಿಲ್ಲ] ಎಂದು ಕಂಡುಬಂದಿರುತ್ತದೆ ಕಾರಣ, ಪಾಲು ವಿಭಾಗದ ಪ್ರಕಾರ ಹಕ್ಕುಬದಲಾವಣೆ ಮಾಡಲು ಬಾರದೇ ಇರುವುದರಿಂದ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಈ ಕೆಳಕಂಡಂತೆ ಆದೇಶ;

**-:ಆದೇಶ:-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.73/2015-16 ರ ಪ್ರಕರಣದಲ್ಲಿ ವರ್ಲಹಳ್ಳಿ ಗ್ರಾಮದ ಸ.ನಂ.463ಸಿ/1ಎ ವಿಸ್ತೀರ್ಣ 7-31 ಎಕರೆ ಜಮೀನಿಗೆ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:23.06.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

23/6/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಉಪ ತಹಶೀಲ್ದಾರರು,
ನಾಡ ಕಛೇರಿ, ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.

8/8/16